ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರಿಗೆ ಆ ವಿವರಗಳನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಿವೆದ ಪ್ರಶ್ನೋತಗಳ ಪಟ್ಟಿ

ವಿಷಯ.—ಆರೋಗ್ಯ ಕಾರ್ಯಕರ್ತರ ಹುದ್ದೆಗೆ ಸಂದರ್ಶನ

ಪ್ರ. ಸಂಖ್ಯೆ 101 (314) ಶ್ರೀ ಆರ್. ಎನ್. ನಾಯ್ಕ (ಭಟಕಳ) ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 1984ನೇ ಸಾಲಿನಲ್ಲಿ ಆರೋಗ್ಯ ಕಾರ್ಯಕರ್ತರ ಹುದ್ದೆಗೆ ಸಂದರ್ಶನ ನಡೆಸಲಾಯಿತೆ ;

ಆ) ಹಾಗಿಲ್ಲದಿದ್ದಲ್ಲಿ ಸದರಿ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗಿದೆಯೆ ;

ಇ) ಹಾಗಿದ್ದಲ್ಲಿ ; ಅದಕ್ಕೆ ಕಾರಣವೇನು ; ಹಾಗೂ ಅದನ್ನು ಯಾವಾಗ ಪ್ರಕಟಿಸಲಾಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಚಿವರು).—

ಅ) ಹೌದು

ಆ) ಹೌದು

ಇ) ಉದ್ಭವಿಸುವುದಿಲ್ಲ.

ವಿಷಯ : ಬೀದರ್ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವುದು

ಪ್ರ. ಸಂಖ್ಯೆ 102 (303) ಶ್ರೀ ಬಸವರಾಜ ಪಾಟೀಲ (ಮುಮ್ನಾಬಾದ್).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರವು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿದೆಯೆ ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಮತ್ತು ಎಲ್ಲೆಲ್ಲಿ ಪ್ರಾರಂಭಿಸಲಾಗಿದೆ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು). —

ಅ) 1983-84ನೇ ಜಾಲಿನಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಉಜಲಾಂಬ ಎಂಬ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವು ಮಂಜೂರಾಗಿದೆ. 1984-85ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಪ್ರಾಥಮಿಕ ಆರೋಗ್ಯ ಕೇಂದ್ರವು ಮಂಜೂರಾಗಿರುವುದಿಲ್ಲ.

ವಿಷಯ : ರಾಜ್ಯದಲ್ಲಿ ನಡೆದ ಕೊಲೆಗಳು.

ಪ್ರ. ಸಂಖ್ಯೆ 103 (273) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ 1980ರ ನಂತರ ನಡೆದ ಕೂಲಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳಿಗೆ ಕಾರಣಗಳೇನು. (ವಿವರವಾದ ಮಾಹಿತಿಯನ್ನು ಒದಗಿಸುವುದು) ;

ಆ) ಬೆಳಗಾವಿ ಜಿಲ್ಲೆಯಲ್ಲಿ 1980ರ ನಂತರ ಯಾವ ತಾಲ್ಲೂಕಿನಲ್ಲಿ ಹೆಚ್ಚಿಗೆ ಕೂಲಿ ನಡೆದಿರುತ್ತದೆ. ಹಾಗೂ ಕೊಲೆಗಳ ಸಂಖ್ಯೆ ಎಷ್ಟು.

ಇ) ಕೊಲೆಗಳನ್ನು ತಡೆಹಿಡಿಯುವುದರಲ್ಲಿ ಸರ್ಕಾರಿ ಯಂತ್ರನೀಯ ವಿಫಲತೆಯೇ ಏನಾದರೂ ಇದ್ದುದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಈ) ಪೊಲೀಸ್ ಇಲಾಖೆಯ ವಿಫಲತೆಯಿಂದ ಆದಂತಹ ಕೊಲೆಗಳಲ್ಲಿ ನಿಲಂಬಿತ ಮಾಡಿದ ಪೊಲೀಸ್ ಅಧಿಕಾರಿಗಳ ಸಂಖ್ಯೆ ವಿಷ್ಟು.

ಉ) ಹೆಚ್ಚಿಗೆ ಕೊಲೆ ನಡೆದಂತಹ ಸಂದರ್ಭದಲ್ಲಿ ನೊಂದ ಕುಟುಂಬಗಳಿಗೆ ನೇರವಾಗಿ ಕಾಯ್ದೆಯ ಹಾಗೂ ಆರ್ಥಿಕ ಸಹಾಯ ನೀಡಲು ಸರ್ಕಾರದ ಕಾರ್ಯಕ್ರಮವೇನು.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—

ಅ) 5,287 (1-1-80ರಿಂದ 30-6-85ರವರೆಗೆ) ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಸೂಚಿಸಿದೆ.

ಈ ಕೊಲೆಗಳಿಗೆ ಮುಖ್ಯವಾದ ಕಾರಣಗಳು ಈ ಕೆಳಕಂಡಂತಿವೆ.

1. ಜಮೀನು ವ್ಯಾಜ್ಯ
2. ಅನೈತಿಕ ಸಂಬಂಧ
3. ಲಾಭಕ್ಕಾಗಿ
4. ಆಕಸ್ಮಿಕ ಉದ್ರೇಕ
5. ವರದಕ್ಷಿಣೆಗಾಗಿ
6. ಕುಟುಂಬ ವಿವಾದ
7. ಗಲಭೆಗಳು
8. ಕೋಮು ಪರ ಮತ್ತು ವಿರುದ್ಧ ಗುಂಪುಗಳ ಘರ್ಷಣೆ
9. ಆಸ್ತಿ ವಿವಾದ
10. ತಾಂತ್ರಿಕ ಕೊಲೆಗಳು
11. ಜನರನ್ನು ಬಚ್ಚಿಡುವುದು ಇತ್ಯಾದಿಗಳು.

ಆ) ಗೋಕಾಕ್ ತಾಲ್ಲೂಕಿನಲ್ಲಿ. ಆಲ್ಲಿ ಈ ಅವಧಿಯಲ್ಲಿ 105 ಕೊಲೆಗಳು ನಡೆದಿವೆ. 1-1-80 ರಿಂದ 30-6-85ರವರೆಗೆ)

ಇ) ಇಲ್ಲ.

ಈ) ಪೊಲೀಸ್ ಇಲಾಖೆಯ ವಿಫಲತೆಯಿಂದ ಯಾವ ಕೊಲೆಯೂ ಆಗಿಲ್ಲ.

ಉ) ಎಲ್ಲ ಕೊಲೆ ಮೊಕದ್ದಮೆಗಳಲ್ಲಿ ಅಪರಾಧಿಗಳ ವಿರುದ್ಧ ವಾದ ಮಾಡುವ ಜವಾಬ್ದಾರಿ ಸರ್ಕಾರದ್ದು. ಕೊಲೆ ನಡೆದ ಸಂದರ್ಭದಲ್ಲಿ ನೊಂದ ಕುಟುಂಬಗಳಿಗೆ ಆರ್ಥಿಕ ಸಹಾಯಕೊಡಲು ಕಾನೂನಿನಲ್ಲಿ ಅವಕಾಶವಿಲ್ಲ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪಟ್ಟಿ.

ಶ್ರೀ ಎ. ಲಕ್ಷ್ಮೀಸಾಗರ್.—(ಸದರಿ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಗಿದೆ).

ಅಧ್ಯಕ್ಷರು.—ಲಿಖಿತ ಉತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

ವಿಷಯ ; ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳಿಗೆ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಸಂದರ್ಶನ ದೊರಕಿಸುವುದು.

ಪ್ರ. ಸಂಖ್ಯೆ 41 (196) ಶ್ರೀ ಎಂ. ಸಿ. ಕೇಶವಮೂರ್ತಿ (ಆನೇಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಸರ್ಕಾರದ ಇಲಾಖೆಗಳಲ್ಲಿ ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಸಂದರ್ಶನ ನೀಡುತ್ತಿರುವುದರಿಂದ ಗ್ರಾಮಾಂತರ ಪ್ರದೇಶದಿಂದ ಬಂದ ಸಾಮಾನ್ಯ ಅಂಕಗಳನ್ನು ಪಡೆದ ಅಭ್ಯರ್ಥಿಗಳಿಗೆ ಸಂದರ್ಶನವೇ ಸಿಗುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಈ ಅಂಕಗಳ ಆಧಾರದ ಮೇಲೆ ಸಂದರ್ಶನ ನೀಡುತ್ತಿರುವುದರಿಂದ ನಗರ ಪ್ರದೇಶದವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹುದ್ದೆಗಳು ಲಭ್ಯವಾಗುತ್ತಿದ್ದು, ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದಲ್ಲಿ ಅವರಿಗೆ ಹುದ್ದೆಗಳನ್ನು ಕಾದಿರಿಸಲು ಅಥವಾ ಸಾಮಾನ್ಯ ಅಂಕಗಳಿಸಿದವರಿಗೆಲ್ಲಾ ಸಂದರ್ಶನ ದೊರಕಿಸಿ ಕೊಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ನಿಗದಿಪಡಿಸಿರುವ ಅರ್ಹತೆ ಪರೀಕ್ಷೆಯಲ್ಲಿ ತೆಗೆದುಕೊಂಡ ಅಂಕಗಳ ಮೇಲೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ಗ್ರಾಮಾಂತರ/ನಗರ ಪ್ರದೇಶದಿಂದ ಬಂದಿರುವರೋ, ಎಂಬ ಬಗ್ಗೆ ನಿರ್ದಿಷ್ಟವಾದ ಮಾಹಿತಿಯು ಲಭ್ಯವಿಲ್ಲ.

ಆ) ಅಭ್ಯರ್ಥಿಗಳ ನಿರ್ವಹಣೆ ಮತ್ತು ಮೀಸಲಾತಿ ನೀತಿ ಆಧಾರದ ಮೇಲೆ ಅವರನ್ನು ಆಯ್ಕೆ ಮಾಡಲಾಗುವುದು.

ಇ) ಕಾನೂನಿನ ಪ್ರಕಾರ ಗ್ರಾಮೀಣ ಪ್ರದೇಶಗಳಿಂದ ಬರುವ ಅಭ್ಯರ್ಥಿಗಳಿಗೆ ಹುದ್ದೆಗಳನ್ನು ಮೀಸಲಿಡಲು ಸಾಧ್ಯವಿಲ್ಲ.